# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 874 |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | 19.08.2025 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2024-25ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಮಾಡದ ರೈತರಿಗೆ ಈ ವರ್ಷ ಹವಾಮಾನ ಆಧಾರಿತ ಬೆಳೆ ವಿಮೆ ಪರಿಹಾರಕ್ಕೆ ನೋಂದಣಿ ಮಾಡಿ ಪ್ರಿಮಿಯಮ್ ಹಣ ಪಾವತಿಸಲು ಅವಕಾಶ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿರುವುದಿಲ್ಲ .<br><br>ಬೆಳೆ ವಿಮೆ ನೋಂದಣಿ ಸಮಯದಲ್ಲಿ ಬೆಳೆ ಸಮೀಕ್ಷೆ ಪ್ರಕಾರ ರೈತರು ಬೆಳೆದ ಬೆಳೆಗಳ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದ್ದು, ಇದಕ್ಕಾಗಿ ಪ್ರಸ್ತುತ ವರ್ಷದಲ್ಲಿ (2025-26) ಬಹು ವಾರ್ಷಿಕ ಬೆಳೆಗಳನ್ನು ನೋಂದಣಿ ಮಾಡುವಾಗ ಹಿಂದಿನ ವರ್ಷಗಳಾದ ಮುಂಗಾರು 2024ರ ಮತ್ತು ಮುಂಗಾರು 2023 ರ ಬೆಳೆ ಸಮೀಕ್ಷೆ ದತ್ತಾಂಶವನ್ನು ಪರಿಗಣಿಸಲಾಗುತ್ತದೆ. ಈ ಎರಡೂ ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಬೆಳೆ ಬೆಳೆದಿದ್ದರೂ ಸಹ ರೈತರು ಪ್ರೀಮಿಯಂ ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು, ಬೆಳೆ ವಿಮೆ ಮಾಡಿಸಬಹುದಾಗಿರುತ್ತದೆ.</td></tr>
<tr><td>ಆ)</td><td>ಪ್ರಸಕ್ತ ಸಾಲಿನಲ್ಲಿ ನೋಂದಣಿ ಮಾಡಿ ಪ್ರಿಮಿಯಂ ಕಟ್ಟಲು ಅವಕಾಶ ಇಲ್ಲದೆ ಕರಾವಳಿ ಜಿಲ್ಲೆಗಳ ಸಾವಿರಾರು ರೈತರು ಯೋಜನೆ ಸೌಲಭ್ಯ ಪಡೆಯಲು ವಂಚಿತರಾಗಿರುವುದರಿಂದ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು:</td><td rowspan="2">ರೈತರು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಸೌಲಭ್ಯ ಕಲ್ಪಿಸಲು ಈ ಕೆಳಕಾಣಿಸಿದ ಕ್ರಮ ಕೈಗೊಳ್ಳಲಾಗಿದೆ.<br><br>ಪ್ರತಿ ವರ್ಷ ಕೃಷಿ ಇಲಾಖೆ ಉಸ್ತುವಾರಿಯಲ್ಲಿ, ಜಿಲ್ಲಾ ಮತ್ತು ತಾಲ್ಲೂಕು ಆಡಳಿತದ ಮೇಲುಸ್ತುವಾರಿಗೆ ಸಂಬಂಧಪಟ್ಟ ಇಲಾಖೆಗಳ ಸಹಭಾಗಿತ್ವದಲ್ಲಿ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ. 2023-24ನೇ ಸಾಲಿನಲ್ಲಿ ಕರಾವಳಿ ಜಿಲ್ಲೆಗಳಾದ ಉಡುಪಿ ಜಿಲ್ಲೆಯಲ್ಲಿ ಶೇ. 99 ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.95 ರಷ್ಟು ಹಾಗೂ 2024-25ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಶೇ. 97 ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.85 ರಷ್ಟು ಬೆಳೆ ಸಮೀಕ್ಷೆ ನಡೆಸಿದ್ದು, ಅದರಂತೆ ರೈತರು ಬೆಳೆ ಬೆಳೆದಿರುವ ವಿವರಗಳನ್ನೊಳಗೊಂಡ ಲಭ್ಯವಿರುವ ದತ್ತಾಂಶಗಳ ಆಧಾರದ ಮೇರೆಗೆ ನೋಂದಣಿ ಮಾಡಲಾಗುತ್ತಿದೆ. ಈ ಎರಡೂ ವರ್ಷಗಳಲ್ಲಿ ಯಾವುದಾದರೂ ಒಂದು</td></tr>
<tr><td>(ಇ)</td><td>ಕಳೆದ ಸಾಲಿನಲ್ಲಿ ಬೆಳೆ ಸಮೀಕ್ಷೆ ಮಾಡದ ರೈತರಿಗೂ 2025-26ನೇ ಸಾಲಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆಗೆ ಪ್ರೀಮಿಯಂ ಕಟ್ಟಲು ಅವಕಾಶ ಮಾಡಿಕೊಡುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು:</td></tr>
</table>

| | | |
|---|---|---|
| | | ವರ್ಷದಲ್ಲಿ ಬೆಳೆ ಬೆಳೆದಿದ್ದರೂ ಸಹ ಬೆಳೆ ವಿಮೆ ಮಾಡಿಸಬಹುದಾಗಿರುವುದರಿಂದ ರೈತರು ಈ ಯೋಜನೆ ಸೌಲಭ್ಯ ಪಡೆಯಲು ವಂಚಿತರಾಗುವ ಸಾಧ್ಯತೆಯಿರುವುದಿಲ್ಲ. |
| (ಈ) | ಬೆಳೆ ವಿಮೆ ಪ್ರಿಮಿಯಂ ಕಟ್ಟುವ ಅವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾವುದೇ? | 2025-26ನೇ ಸಾಲಿನ ಮುಂಗಾರು ಹಂಗಾಮಿನಡಿ ಪ್ರಸ್ತುತ 31ನೇ ಜುಲೈ,2025ರವರೆಗೆ ಅಂತಿಮ ದಿನಾಂಕವಾಗಿದ್ದ ವಿವಿಧ ಜಿಲ್ಲೆಗಳ ಎಲ್ಲಾ ಅಧಿಸೂಚಿತ ಬೆಳೆಗಳಿಗೆ ರೈತರ ನೋಂದಣಿಯ ಅಂತಿಮ ದಿನಾಂಕವನ್ನು ಸಾಲ ಪಡೆಯದ ರೈತರು (Non-Loane farmers) ಗಳಿಗೆ ದಿನಾಂಕ:14.08.2025 ಮತ್ತು ಸಾಲ ಪಡೆದ ರೈತರು (Loanee farmers-provided the KCC or crop loan is sanctioned/ renewed on or before 31st July 2025) ಗಳಿಗೆ ದಿನಾಂಕ:30.08.2025 ರವರೆಗೆ ವಿಸ್ತರಿಸಿ ಈಗಾಗಲೆ ಆದೇಶಿಸಲಾಗಿರುತ್ತದೆ. ಉಳಿದಂತೆ 31ನೇ ಜುಲೈ,2025 ಗಿಂತೆ ಮುಂಚಿತವಾಗಿ ಅಂತಿಮ ದಿನಾಂಕ/ ವಿಸ್ತರಿಸಿದ ದಿನಾಂಕವಾಗಿದ್ದ (ಉದಾಹರಣೆಗೆ 15-7-2025) ಬೆಳೆಗಳ ನೊಂದಣಿ ದಿನಾಂಕಗಳಲ್ಲಿ ಯಾವುದೆ ಬದಲಾವಣೆ ಇರುವುದಿಲ್ಲ. |

ಸಂಖ್ಯೆ: HORTI 363 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು